ರಾಜ್ಯದಲ್ಲಿ ತೋಟಗಾರಿಕೆ ಫಾರಂ ಅಭಿವೃದ್ಧಿಪಡಿಸುವ ವಿಚಾರ.

2837: (3770)

ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ತೋಟಗಾರಿಕೆ ಇಲಾಖೆ ವ್ಯಾಪ್ತಿಯಲ್ಲಿ ಎಷ್ಟು ಫಾರಂಗಳಿವೆ? (ಜಿಲ್ಲಾವಾರು ವಿವರ)

ಆ) ಈ ಫಾರಂಗಳ ನಿರ್ವಹಣೆಗೆ ಸರ್ಕಾರ ಎಷ್ಟು ಹಣ ಖರ್ಚು ಮಾಡುತ್ತಿದೆ?

ಇ) ಉತ್ತರ ಕನ್ನಡ ಜಿಲ್ಲೆಯಲ್ಲಿ ಎಷ್ಟು ಫಾರಂಗಳಿವೆ? ಬರುತ್ತಿರುವ ಆದಾಯ ಎಷ್ಟು?

ಈ) ಸಿರ್ಸಿ, ಯಲ್ಲಾಪುರ, ಅಂಕೋಲಾ ತಾಲ್ಲೂಕಿನಲ್ಲಿರುವ ಫಾರಂಗಳ ಜಮೀನಿನ ವಿಸ್ತೀರ್ಣವೆಷ್ಟು?

ಉ) 1996-97, 97-98ನೇ ಸಾಲಿನಲ್ಲಿ ಫಾರಂಗಳಿಗೆ ಖರ್ಚು ಮಾಡಿದ ಹಣವೆಷ್ಟು? ಯಾವುದಕ್ಕೆ ಖರ್ಚು ಮಾಡಲಾಗಿದೆ/ ಅದರ ಆದಾಯವೆಷ್ಟು?

ಊ) ಈ ಫಾರಂಗಳ ಅಭಿವೃದ್ಧಿಗೆ ಸರ್ಕಾರದ ಮುಂದಿನ ಯೋಜನೆಗಳೇನು?

ಶ್ರೀ ಡಿ.ಟಿ.ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು):

ಅ) ರಾಜ್ಯದಲ್ಲಿ ಒಟ್ಟು 397 ಫಾರಂಗಳಿದ್ದು ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ.

ಕ್ರ.ಸಂ.	ಜಿಲ್ಲೆಯ ಹೆಸರು	ತೋಟಗಾರಿಕೆ ಕ್ಷೇತ್ರ: ಸಸ್ಯಾಗಾರಗಳ ಸಂಖ್ಯೆ
1)	ಬೆಂಗಳೂರು (ನಗರ)	7
2)	ಬೆಂಗಳೂರು (ಗ್ರಾಮಾಂತರ)	16
3)	ತುಮಕೂರು	20
4)	ಕೋಲಾರ	31
5)	ಚಿತ್ರದುರ್ಗ	21

6)	ಶಿವಮೊಗ್ಗ	15
7)	ಮೈಸೂರು	34
8)	ಮಂಡ್ಯ	18
9)	ಕೊಡಗು	13
10)	ಹಾಸನ	16
11)	ಚಿಕ್ಕಮಗಳೂರು	14
12)	ದಕ್ಷಿಣ ಕನ್ನಡ	23
13)	ಬೆಳಗಾವಿ	29
14)	ಬಿಜಾಪುರ	17
15)	ಧಾರವಾಡ	37
16)	ಉತ್ತರ ಕನ್ನಡ	15
17)	ಗುಲ್ಬರ್ಗಾ	17
18)	ಬೀದರ್	13
19)	ರಾಯಚೂರು	25
20)	ಬಳ್ಳಾರಿ	21
	ಒಟ್ಟು	397

ಆ) ಈ ಘಾರಂಗಳ ನಿರ್ವಹಣೆಗೆ ಇಲಾಖೆಯು ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಈ ಕೆಳಕಂಡಂತೆ ಖರ್ಚು ಮಾಡುತ್ತಿದೆ. 1997-98ನೇ ಸಾಲಿನಲ್ಲಿ ಈ ಕ್ಷೇತ್ರಗಳಿಗಾಗಿ ರೂ.426.87 ಲಕ್ಷಗಳನ್ನು ವೆಚ್ಚ ಮಾಡಲಾಗಿದ್ದು, 1998-99ನೇ ಸಾಲಿಗೆ ಯೋಜನೆ ಹಾಗೂ ಯೋಜನೇತರ ಬಾಬ್ತುಗಳಲ್ಲಿ ಒಟ್ಟು ರೂ.778.37 ಲಕ್ಷಗಳನ್ನು ವೆಚ್ಚ ಮಾಡಲು ಉದ್ದೇಶಿಸಲಾಗಿದೆ.

ಇ) ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು 15 ತೋಟಗಾರಿಕೆ ಕ್ಷೇತ್ರ :

ಸಸ್ಯಾಗಾರಗಳಿದ್ದು ಈ ಕ್ಷೇತ್ರಗಳಿದ 1997-98ರ ಸಾಲಿನಲ್ಲಿ 15.23 ಲಕ್ಷ ಆದಾಯವನ್ನು ಪಡೆಯಲಾಗಿದೆ.

ಈ) ಈ ತಾಲ್ಲೂಕುಗಳ ಫಾರಂಗಳ ಜಮೀನಿನ ವಿಸ್ತೀರ್ಣ ಈ ಕೆಳಕಂಡಂತಿರುತ್ತದೆ.

ಕ್ರ.ಸಂ.	ತಾಲ್ಲೂಕಿನ ಹೆಸರು	ಫಾರಂಗಳ ವಿಸ್ತೀರ್ಣ (ಎಕರೆಗಳಲ್ಲಿ)	ಕ್ಷೇತ್ರದ ಹೆಸರು
1)	ಸಿರ್ಸಿ	55.70	ಕೆರ್‌ಕನಹಳ್ಳಿ ತೋ.ಕ್ಷೇತ್ರ
2)	ಯಲ್ಲಾಪುರ	7.00	ಹಿತ್ತಲಕಾರಗದ್ದೆ ಕ್ಷೇತ್ರ
3)	ಅಂಕೋಲಾ	5.00	ಹಿಚ್ಕಿಡ ತೋ.ಕ್ಷೇತ್ರ

ಉ) ಉತ್ತರ ಕನ್ನಡ ಜಿಲ್ಲೆಯ ತೋಟಗಾರಿಕೆ ಕ್ಷೇತ್ರಗಳ ಖರ್ಚು ಹಾಗೂ ಆದಾಯ ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರ.ಸಂ.	ವರ್ಷ	ಫಾರಂಗಳಿಗೆ ಖರ್ಚು ಮಾಡದ ಹಣ (ಲಕ್ಷ ರೂ.ಗಳಲ್ಲಿ)	ಯಾವುದಕ್ಕೆ ಖರ್ಚು ಮಾಡಲಾಗಿದೆ.	ಫಾರಂಗಳಿಂದ ಬಂದ ಆದಾಯ (ಲಕ್ಷ ರೂ.ಗಳಲ್ಲಿ)
1.	1996-97	24.89	ನಿರ್ವಹಣೆ, ಸಸ್ಯೋತ್ಪಾದನೆ ಮತ್ತು ಮೂಲ ಭೂತ ಸೌಕರ್ಯ ಅಭಿವೃದ್ಧಿ	8.37
2.	1997-98	41.80	ನಿರ್ವಹಣೆ, ಸಸ್ಯೋತ್ಪಾದನೆ ಮತ್ತು ಮೂಲ ಭೂತ ಸೌಕರ್ಯ ಅಭಿವೃದ್ಧಿ	15.23

ಊ) ಉತ್ತರ ಕನ್ನಡ ಜಿಲ್ಲೆಯಲ್ಲಿರುವ ತೋಟಗಾರಿಕೆ ಕ್ಷೇತ್ರಗಳ ಅಭಿವೃದಿಗೆ 1998-99ನೇ ಸಾಲಿನಲ್ಲಿ ಒಟ್ಟು ರೂ.6.65 ಲಕ್ಷ ಅನುದಾನವನ್ನು ವಿನಿಯೋಗಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅವುಗಳಲ್ಲಿ ಕ್ಷೇತ್ರಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವುದು ಹಾಗೂ ಕ್ಷೇತ್ರಕ್ಕೆ ಬೇಕಾಗುವ ಕಾಮಗಾರಿ ಕಾರ್ಯಗಳನ್ನು ಕೈಗೊಳ್ಳಲಾಗುವುದು.

ಅಂಕೋಲದಲ್ಲಿ ಬಸ್ ಡಿಪೋ.

2838: (3767)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1996-97, 1997-98ಕ್ಕೆ ಒಟ್ಟು ಮಂಜೂರಾದ ಡಿಪೋಗಳೆಷ್ಟು (ಜಿಲ್ಲಾವಾರು ವಿವರ ನೀಡುವುದು);

ಆ) ಉತ್ತರಕನ್ನಡಜಿಲ್ಲೆಯ ಅಂಕೋಲದಲ್ಲಿ ಡಿಪೋ ಮಾಡುವ ವಿಚಾರ ಯಾವ ಹಂತದಲ್ಲಿದೆ?

ಇ) ಅದನ್ನು ಜರೂರಾಗಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು 1996-97ನೇ ಸಾಲಿನಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಬಸ್ ಡಿಪೋಗಳಿಗೆ ಮಂಜೂರಾತಿಯನ್ನು ನೀಡಲಾಗಿರುತ್ತದೆ.

1. ಶ್ರೀನಿವಾಸಪುರ (ಕೋಲಾರ ಜಿಲ್ಲೆ)
2. ಬಾಗೇಪಲ್ಲಿ (ಕೋಲಾರ ಜಿಲ್ಲೆ)
3. ವಿಶ್ವೇಶ್ವರನಗರ ಸಾರಿಗೆ (ಬೆಂಗಳೂರು ನಗರ ಜಿಲ್ಲೆ)
4. ದೊಡ್ಡಬಳ್ಳಾಪುರ (ಬೆಂಗಳೂರು ಗ್ರಾಮಾಂತರಜಿಲ್ಲೆ))
5. ರಾಣೆಬೆನ್ನೂರು (ತಾತ್ಕಾಲಿಕ) (ಧಾರವಾಡಜಿಲ್ಲೆ)
6. ಬಿಜಾಪುರ (ಮಿನಿ ಬಸ್ ಘಟಕ) (ಬಿಜಾಪುರ ಜಿಲ್ಲೆ)